ನಿವೇದನೆ

# ಭ್ರಮೆ ಕಳಚಿದ ಫಲಿತಾಂಶ ಆಸೆ ಚಿಗುರಿಸಿದ ಮತದಾರ

ಎರಡು ರಾಜ್ಯಗಳ ವಿಧಾನಸಭಾ ಫಲಿತಾಂಶಕ್ಕೆ ಸಂಬಂಧಿಸಿದಂತೆ ಪ್ರಾದೇಶಿಕ ಆಶೋತ್ತರಗಳು, ಜಾತಿ ಸಮೀಕರಣಗಳು, ಸ್ಥಳೀಯವಾಗಿ ಬೆಸೆದುಕೊಂಡಿರುವ ಮನುಷ್ಯ ಸಂಬಂಧಗಳ ಪಾತ್ರ ಏನೇನೂ ಇಲ್ಲವೇನೋ ಎನ್ನುವಂತಿತ್ತು ಚುನಾವಣೆಯ ಸುತ್ತ ಹೊಸೆದ ಸಂಕಥನ. ಆದರೆ, 'ಏಕೋದ್ದೇಶ' ಮತ್ತು 'ಏಕಮಂತ್ರ' ಎಲ್ಲ ಚುನಾವಣೆಗಳಲ್ಲೂ ಏಕರೀತಿ ಕೆಲಸ ಮಾಡುವುದಿಲ್ಲ ಎಂಬುದು ಫಲಿತಾಂಶದಿಂದ ರುಜುವಾತಾಗಿದೆ.



ಈಶ್ವರ

ಜನತಂತ್ರದ ಗಮ್ಮತ್ತೇ ಅಂತಹುದು! ಅದರ ಶಕ್ತಿ ಯಾವ ಅಳತೆಗೂ ನಿಲುಕುವುದಿಲ್ಲ. ಒಂದೊಂದು ಚುನಾವಣೆಯೂ ಅಂತಹದೊಂದು ಅಚ್ಚರಿಯನ್ನು ನಿಮ್ಮ ಮುಂದೆ ತೆರೆದಿಡುತ್ತದೆ. ಸ್ಥಾಪಿತ ತಿಳಿವಳಿಕೆಯನ್ನು ಹುಸಿಯಾಗಿಸುತ್ತದೆ. ವಿಶ್ಲೇಷಣೆಗಳನ್ನು, ಸಮೀಕ್ಷೆಗಳನ್ನು ಸುಳ್ಳು ಮಾಡುತ್ತದೆ. ಆ ಮೂಲಕ, ಮತದಾರನ ನಡೆ ಯಾವ ಪರಿ ನಿಗೂಢ ಎಂಬುದನ್ನು ಮನವರಿಕೆ ಮಾಡಿಸುತ್ತಲೇ ಏಕಕಾಲಕ್ಕೆ ಹಲವು ಬಗೆಯ ಸಂದೇಶಗಳನ್ನು ರವಾನಿಸುತ್ತದೆ. ಅಷ್ಟೇ ಅಲ್ಲ; ಮತದಾರನ ಮಿಡಿತ ಅರಿಯುವಲ್ಲಿ ಪಂಡಿತರು ಅಂತ ಭಾವಿಸಿದವರ ಭ್ರಮೆಗಳನ್ನು ಕಳಚಬಲ್ಲದು. ಅಧಿಕಾರಸ್ಥರ ಅಹಂಕಾರವನ್ನು ಹಾರಾಟ–ಚೀರಾಟಗಳಿಲ್ಲದೆ ಇಳಿಸಬಲ್ಲದು.

ಮಹಾರಾಷ್ಟ್ರ ಮತ್ತು ಹರಿಯಾಣ ವಿಧಾನಸಭೆಗಳ ಚುನಾವಣಾ ಫಲಿತಾಂಶವನ್ನು, ಮಾಧ್ಯಮಗಳಲ್ಲಿ ಬಂದ ವಿಶ್ಲೇಷಣೆಗಳು ಹಾಗೂ ಮತಗಟ್ಟೆ ಸಮೀಕ್ಷೆಗಳೊಂದಿಗೆ ಒಮ್ಮೆ ತುಲನೆ ಮಾಡಿ ನೋಡಿ; ಬೆರಗುಗೊಳಿಸುವಂತಹ ಅಚ್ಚರಿಗಳು ನಿಮ್ಮ ಕಣ್ಣೆದುರು ಹಾದು ಹೋಗುತ್ತವೆ. ಪ್ರಜಾಪ್ರಭುತ್ವದ ಬೇರುಗಳು ಶಿಥಿಲವಾಗುತ್ತಿವೆ ಎಂಬ ಆರೋಪಗಳ ಬಗೆಗೆ ನಿಮ್ಮ ಮನದೊಳಗೆ ಒಂದು ಸಂದೇಹದ ಬೀಜವಾದರೂ ಮೊಳಕೆಯೊಡೆಯುವುದು ನಿಸ್ಸಂದೇಹ.

ಈ ಎರಡೂ ರಾಜ್ಯಗಳ ಚುನಾವಣೆಯನ್ನು– ರಾಜಕೀಯದಲ್ಲಿ ಹೆಚ್ಚಿನ ಆಸಕ್ತಿಯುಳ್ಳವರು ಸಹ– ಬಹುಪಾಲು ಮಂದಿ ಲೆಕ್ಕಕ್ಕೇ ಇಟ್ಟಿರಲಿಲ್ಲ. ಫಲಿತಾಂಶ 'ಹೀಗೇ ಇರುತ್ತದೆ' ಎಂದು ಹೆಚ್ಚಿನ ಮಂದಿ ನಿರೀಕ್ಷಿಸಿದ್ದರು. ಮಾಧ್ಯಮಗಳಲ್ಲಿ ಪ್ರಕಟವಾದ ವಿಶ್ಲೇಷಣೆಗಳು, ಮತಗಟ್ಟೆ ಸಮೀಕ್ಷೆಗಳು... ಎಲ್ಲದರ ನಿನಾದ ಒಂದೇ ಆಗಿತ್ತು. ಆಡಳಿತಾರೂಢರ ಪರ ಅಲೆ ಎದ್ದಿದೆ ಎಂಬುದೇ ಆ ಒಕ್ಕೊರಲ ಮಾತು. ವಿರೋಧ ಪಕ್ಷಗಳ ಇರುವಿಕೆಯನ್ನೇ ಅಲ್ಲಗಳೆಯುವಂತೆ ಇತ್ತು ಆ ಮಾತಿನ ವರಸೆ. ಪ್ರಾದೇಶಿಕ ಆಶೋತ್ತರಗಳು, ಜಾತಿ ಸಮೀಕರಣಗಳು, ಸ್ಥಳೀಯವಾಗಿ ಬೆಸೆದುಕೊಂಡಿರುವಂತಹ ಮನುಷ್ಯ ಸಂಬಂಧಗಳ ಪಾತ್ರ ಈ ಚುನಾವಣೆಯಲ್ಲಿ ಏನೇನೂ ಇಲ್ಲವೇನೋ ಎಂಬಂತೆ ಇತ್ತು ಚುನಾವಣೆ ಸುತ್ತ ಹೊಸೆದ ಸಂಕಥನ.

ಮಾಧ್ಯಮದವರು ಮತ್ತು ಸಮೀಕ್ಷೆಗಳು ಹೇಳಿದ್ದು ಒತ್ತಟ್ಟಿಗಿರಲಿ, ಸ್ವತಃ ವಿರೋಧ ಪಕ್ಷಗಳೇ ಕೈಚೆಲ್ಲಿ ಕೂತಿದ್ದವು. ಶಸ್ತ್ರತ್ಯಾಗ ಮಾಡಿದ ಯೋಧರಂತೆ ಉತ್ಸಾಹ ಕಳೆದುಕೊಂಡಿದ್ದವು. ಲೋಕಸಭೆಯಲ್ಲಿ ಸತತ ಎರಡು ಅವಧಿಗೆ ವಿರೋಧ ಪಕ್ಷವೆಂದು ಅಧಿಕೃತವಾಗಿ ಮಾನ್ಯತೆ ಪಡೆಯಲಾರದಷ್ಟು ಪ್ರತಿಪಕ್ಷಗಳು ಸೊರಗಿರುವ ಈ ಸಂದರ್ಭದಲ್ಲಿ ಈ ಎರಡೂ ರಾಜ್ಯಗಳ ಸ್ಥಿತಿಯೂ ಅದೇ ರೀತಿ ಆಗಬಹುದೇ ಎಂದು ಕೆಲವರಾದರೂ ಶಂಕಿಸಿರಬಹುದು. ಆದರೆ, ಮತದಾರನಲ್ಲಿ ಅಂತಹ ಶಂಕೆ, ಅಂಜಿಕೆಗಳು ಇದ್ದಿರಲಿಲ್ಲ ಎಂಬುದನ್ನು ಫಲಿತಾಂಶ ಎತ್ತಿತೋರಿದೆ. ಪ್ರಜಾಪ್ರಭುತ್ವದ ನಿಜವಾದ ಶಕ್ತಿ ಅಡಗಿರುವುದೇ ಇಲ್ಲಿ. ಅದು, ಗುಪ್ತಗಾಮಿನಿ ಎಂಬುದು ಮತ್ತೊಮ್ಮೆ ಮನದಟ್ಟಾಗಿದೆ.

ಜನರಿಂದ ಆರಿಸಿಬರುವ ಶಾಸಕ, ಸಂಸದರಿಗೆ ವಿರೋಧ ಪಕ್ಷದಲ್ಲಿ ಇರಲು ಬೇಜಾರು ಇರಬಹುದು. ಅಧಿಕಾರ ಕ್ಷಣ ಕೈತಪ್ಪಿದರೆ ಕೆಲವರು ನೀರಿನಿಂದ ಹೊರಬಿದ್ದ ಮೀನಿನಂತೆ ಚಡಪಡಿಸುತ್ತಾರೆ. ಇದಕ್ಕೆ ಪಕ್ಷಭೇದ, ಪ್ರದೇಶಭೇದ ಎಂಬುದು ಇಲ್ಲ. ರಾಜ್ಯಸಭೆ, ಲೋಕಸಭೆಯಿಂದ ಪಂಚಾಯಿತಿ ಮಟ್ಟದವರೆಗೂ ಪಕ್ಷಜಿಗಿತದ ಈ ಪರಿಪಾಟ ವಿಸ್ತರಿಸಿಕೊಂಡಿದೆ. ಜನಪ್ರತಿನಿಧಿಗಳಿಗೆ, ನಾಯಕರಿಗೆ ಬೇಡವಾಗಿರುವ 'ವಿರೋಧ ಪಕ್ಷ' ಮತದಾರನಿಗೆ ಬೇಕಾಗಿದೆ ಎಂಬುದನ್ನು ಈ ಚುನಾವಣೆ ತೋರಿಸಿಕೊಟ್ಟಿದೆ. ನಿರಾಶೆಯ ಕಾರ್ಮೋಡದಲ್ಲಿ ಬೆಳ್ಳಿಗೆರೆ ಮೂಡಿಸಿದೆ.

ಮತ್ತೂ ಒಂದು ಕಾರಣಕ್ಕೆ ಈ ಚುನಾವಣೆ ಮುಖ್ಯವೆನಿಸುತ್ತದೆ. 'ಏಕೋದ್ದೇಶ' ಮತ್ತು 'ಏಕಮಂತ್ರ' ಎಲ್ಲ ಚುನಾವಣೆಗಳಲ್ಲೂ ಏಕರೀತಿ ಕೆಲಸ ಮಾಡುವುದಿಲ್ಲ ಎಂಬುದು ಈ ಫಲಿತಾಂಶದಿಂದ ರುಜುವಾತಾಗಿದೆ. ಅಂದರೆ, ಲೋಕಸಭೆ ಚುನಾವಣೆಯೇ ಬೇರೆ, ವಿಧಾನಸಭೆ ಚುನಾವಣೆಯೇ ಬೇರೆ ಎಂಬುದನ್ನು ಮತದಾರ ಸ್ಪಷ್ಟವಾದ ಗೆರೆ ಕೊರೆದು ನಾಯಕರಿಗೆ ತೋರಿಸಿದ್ದಾನೆ. ಭಿನ್ನತೆಯೇ ಜೀವಾಳವಾದ ಬಹುಮುಖಿ ಭಾರತದ ಬೇರು ಗಟ್ಟಿಗೊಳಿಸುವ ನಿರ್ಣಾಯಕ ನಡೆ ಇದು. ಇಲ್ಲವಾದಲ್ಲಿ, ಪಂಚಾಯಿತಿ ಚುನಾವಣೆಯಿಂದ ಪಾರ್ಲಿಮೆಂಟ್ ಚುನಾವಣೆವರೆಗೂ ಒಂದೇ ಬಗೆಯ 'ಅಸ್ತ್ರ' ಪ್ರಯೋಗವಾಗುವ ಅಪಾಯವಿತ್ತು. ಒಂದೇ ಹೆಸರು, ಒಂದೇ ವಿಚಾರವು ಚುನಾವಣೆ ಗೆಲ್ಲಿಸಬಹುದು ಎಂಬ ಭ್ರಮೆಯನ್ನು ಸಹ ಈ ಎರಡೂ ರಾಜ್ಯಗಳ ಫಲಿತಾಂಶ ಕಳಚಿರುವುದು ಪ್ರಜಾಪ್ರಭುತ್ವದ ಒಟ್ಟಾರೆ ಹಿತದೃಷ್ಟಿಯಿಂದ ಒಳ್ಳೆಯದು. ಮತದಾರನ ಪ್ರೌಢಿಮೆಗೆ ಜೈ ಎನ್ನಲು ಇಷ್ಟು ಸಾಕಲ್ಲವೇ?

■ ಎನ್. ಉದಯಕುಮಾರ್